# ನಗರಾಭಿವೃದ್ಧಿ ಪ್ರಾಧಿಕಾರ,ಮಡಿಕೇರಿ.

ಕೆ.ಎಸ್.ಆರ್.ಟಿ.ಸಿ ಬಸ್ ಡಿಪೋ ಹತ್ತಿರ, ಮಡಿಕೇರಿ-571201..

web site : www.mudamadikeri.org ☎ : 08272-225883

Email id : mudamadikeri@yahoo.in Fax No: 08272-220386

ಸಂಖ್ಯೆ:ಮನಅಪ್ರಾ/ಕೊಟೇಶನ್ ಆಹ್ವಾನ/01/2013-14 ದಿನಾಂಕ: 20.12.2013.

## ಅಲ್ಪಾವಧಿ ಕೊಟೇಶನ್ ಆಹ್ವಾನ.-ಕಛೇರಿ ಪ್ರಕಟಣೆ.

ವಿಷಯ:- 80ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಗದ್ದಿಗೆ ವ್ಯಾಪ್ತಿಯಲ್ಲಿ ಬರುವ 3ಸ್ಮಾರಕ ಕಟ್ಟಡಗಳು ಹಾಗೂ ಪ್ರಾಧಿಕಾರದ ಕಚೇರಿ ಕಟ್ಟಡವೂ ಸೇರಿ 4 ಕಟ್ಟಡಗಳನ್ನು ವಿದ್ಯುತ್ ದೀಪದಿಂದ ಅಲಂಕರಿಸುವ ಬಗ್ಗೆ.

* * * *

ವಿಷಯಕ್ಕೆ ಸಂಬಂಧಿಸಿದಂತೆ, 80ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಕೊಡಗು ಜಿಲ್ಲೆಯ ಕೇಂದ್ರ ಸ್ಥಾನವಾದ ಮಡಿಕೇರಿಯಲ್ಲಿ ನಡೆಯಲಿದ್ದು, ಈ ಬಗ್ಗೆ ದಿನಾಂಕ:08.11.2013 ಮತ್ತು 25.11.2013ರಂದು ನಡೆದ ಪೂರ್ವಭಾವಿ ಸಭೆಯಲ್ಲಿ ಎಲ್ಲಾ ಸರ್ಕಾರಿ/ಅರೆಸರ್ಕಾರಿ ಕಚೇರಿ ಕಟ್ಟಡಗಳನ್ನು ದಿನಾಂಕ07.01.2014 ರಿಂದ 09.01.2014ರವರೆಗೆ (3ದಿವಸಗಳು) ವಿದ್ಯುತ್ ದೀಪಗಳಿಂದ ಅಲಂಕರಿಸಲು ತೀರ್ಮಾನಿಸಿರುವಂತೆ ಹಾಗೂ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಜಿಲ್ಲಾಧಿಕಾರಿಯವರ ಮೌಖಿಕ ಆದೇಶದಂತೆ, ಪುರಾತತ್ವ ಇಲಾಖೆಯ ಗದ್ದಿಗೆ ವ್ಯಾಪ್ತಿಯಲ್ಲಿ ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿ ಪಡಿಸಿರುವ ಉದ್ಯಾನವನದಲ್ಲಿನ 3 ಪ್ರಾಚೀನ ಸ್ಮಾರಕ ಕಟ್ಟಡಗಳನ್ನು ಹಾಗೂ ಪ್ರಾಧಿಕಾರದ ಕಚೇರಿ ಕಟ್ಟಡವನ್ನು ದಿನಾಂಕ:07.01.2014 ರಿಂದ 09.01.2014ರವರೆಗೆ (3 ದಿವಸಗಳು) ವಿದ್ಯುತ್ ದೀಪಗಳಿಂದ ಅಲಂಕರಿಸಲು ಅರ್ಹ ಗುತ್ತಿಗೆದಾರರಿಂದ ಷರತ್ತುಗಳಿಗೊಳಪಟ್ಟು ಅಲ್ಪಾವಧಿ ಕೊಟೇಶನ್‌ನ್ನು ಆಹ್ವಾನಿಸಲಾಗಿರುತ್ತದೆ.

1. ಕೊಟೇಶನ್ ಸಲ್ಲಿಸಲು ಕೊನೆಯ ದಿನಾಂಕ: 02.01.2014ರ ಸಂಜೆ 4.00 ಗಂಟೆಯ ಒಳಗೆ.
2. ಕೊಟೇಶನ್ ತೆರೆಯುವ ದಿನಾಂಕ ಅದೇ ದಿನ ಅಂದರೆ ದಿನಾಂಕ:02.01.2014ರ ಸಂಜೆ 5.00 ಗಂಟೆಗೆ.
3. ಕೊಟೇಶನನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಆಯುಕ್ತರು ಕಾಯ್ದಿರಿಸಿಕೊಂಡಿರುತ್ತಾರೆ.
4. ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಕಛೇರಿಯನ್ನು ಸಂಪರ್ಕಿಸಿ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/-
(ಶ್ರೀ ಅನುರಾಗ್ ತಿವಾರಿ )
ಜಿಲ್ಲಾಧಿಕಾರಿಗಳು ಕೊಡಗು ಜಿಲ್ಲೆ
ಹಾಗೂ ಅಧ್ಯಕ್ಷರು,
ನಗರಾಭಿವೃದ್ಧಿ ಪ್ರಾಧಿಕಾರ,
ಮಡಿಕೇರಿ.

ಸಹಿ/-
(ಶ್ರೀ ಬಿ.ಜಿ.ಗೋವಿಂದ ರಾಜು)
ಆಯುಕ್ತರು(ಪ್ರ),
ನಗರಾಭಿವೃದ್ಧಿ ಪ್ರಾಧಿಕಾರ,
ಮಡಿಕೇರಿ.

# ನಗರಾಭಿವೃದ್ಧಿ ಪ್ರಾಧಿಕಾರ,ಮಡಿಕೇರಿ.

ಕೆ.ಎಸ್.ಆರ್.ಟಿ.ಸಿ ಬಸ್ ಡಿಪೋ ಹತ್ತಿರ, ಮಡಿಕೇರಿ–571201..

web site : www.mudamadikeri.org ☎ : 08272-225883

Email id : mudamadikeri@yahoo.in Fax No: 08272-220386


ಸಂಖ್ಯೆ:ಮನಅಪ್ರಾ/ಕಾರ್ಯಾದೇಶ/01/2013–14 ದಿನಾಂಕ:02.01.2014.

## ಕಾರ್ಯಾದೇಶ

ವಿಷಯ:– 80ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಗದ್ದಿಗೆ ವ್ಯಾಪ್ತಿಯಲ್ಲಿ ಬರುವ 3ಸ್ಮಾರಕ ಕಟ್ಟಡಗಳು ಹಾಗೂ ಪ್ರಾಧಿಕಾರದ ಕಚೇರಿ ಕಟ್ಟಡವೂ ಸೇರಿ 4 ಕಟ್ಟಡಗಳನ್ನು ವಿದ್ಯುತ್ ದೀಪದಿಂದ ಅಲಂಕರಿಸುವ ಬಗ್ಗೆ.

ಉಲ್ಲೇಖ:–1.ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ: 20.12.2013.

2.ನೀವು ಸಲ್ಲಿಸಿರುವ ಕೊಟೇಶನ್ ದಿನಾಂಕ: 30.12.2013.

* * * *

ವಿಷಯಕ್ಕೆ ಸಂಬಂಧಿಸಿದಂತೆ, 80ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ದಿನಾಂಕ:07.01.2014 ರಿಂದ 09.01.2014ರವರೆಗೆ ಮಡಿಕೇರಿಯಲ್ಲಿ ನಡೆಯಲಿದ್ದು, ಸದರಿ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಆಚರಿಸಲು ಗದ್ದಿಗೆ ಉದ್ಯಾನವನದಲ್ಲಿನ 3 ಪ್ರಾಚೀನ ಸ್ಮಾರಕ ಕಟ್ಟಡಗಳನ್ನು ಹಾಗೂ ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿ ಕಟ್ಟಡವನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲು ಉಲ್ಲೇಖಿತ ಪತ್ರದಲ್ಲಿ ಕೊಟೇಶನ್ ಆಹ್ವಾನಿಸಲಾಗಿತ್ತು. ಉಲ್ಲೇಖ(2)ರಲ್ಲಿ ನೀವು ಸಲ್ಲಿಸಿರುವ ಅತ್ಯಂತ ಕಡಿಮೆ ದರದ ಕೊಟೇಶನ್ನು ಅಂಗೀಕರಿಸಲಾಗಿದೆ.

ಆದ್ದರಿಂದ ದಿನಾಂಕ:07.01.2014 ರಿಂದ 09.01.2014ರವರೆಗಿನ 3 ದಿವಸಗಳಂದು ಗದ್ದಿಗೆ ಉದ್ಯಾನವನದಲ್ಲಿನ 3 ಪ್ರಾಚೀನ ಸ್ಮಾರಕ ಕಟ್ಟಡಗಳನ್ನು ಹಾಗೂ ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿ ಕಟ್ಟಡವನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಿ ಉರಿಸಲು ಈ ಮೂಲಕ ಕಾರ್ಯಾದೇಶವನ್ನು ನೀಡಲಾಗಿದೆ.

ಸಹಿ/–

**ಆಯುಕ್ತರು(ಪ್ರ)**
**ನಗರಾಭಿವೃದ್ಧಿ ಪ್ರಾಧಿಕಾರ,**
**ಮಡಿಕೇರಿ.**

ರವರಿಗೆ,

ಮೆ॥ ಭಗವಾನ್ ಎಲೆಕ್ಟ್ರಿಕಲ್ಸ್,
ರಾಣಿಪೇಟೆ,
ಮಡಿಕೇರಿ.